ಬಂಡಿಶೇಷಮ್ಮ ಛತ್ರಕ್ಕೆ ಸೇರಿದ ಜಾಗವನ್ನು ಅನಧಿಕೃತದಾರರು ಯಾರೂ ಅತಿ ಕ್ರಮಿಸಿರುವುದಿಲ್ಲ.

4. ಅನಧಿಕೃತ ವ್ಯಕ್ತಿಗಳು ಆಕ್ರಮಿಸಿರುವ ಜಾಗದ ವಿರುದ್ಧ ನ್ಯಾಯಾಲಯದಲ್ಲಿ ಪ್ರಕರಣ ಬಾಕಿ ಇದ್ದು ನ್ಯಾಯಾಲಯದ ಆದೇಶಕ್ಕನುಗುಣವಾಗಿ ಕ್ರಮ ಕೈಗೊಳ್ಳಲಾಗುವುದು.

ತಿರುಮಲ-ತಿರುಪತಿಯಲ್ಲಿರುವ ಕರ್ನಾಟಕ ರಾಜ್ಯದ ಆಸ್ತಿ

2449(2803) ಶ್ರೀ ವಿ. ಸೋಮಣ್ಣ (ಬಿನ್ನಪೇಟೆ) :— ಮಾನ್ಯ ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ಆಂಧ್ರ ಪ್ರದೇಶದ ತಿರುಮಲ ಹಾಗೂ ತಿರುಪತಿಯಲ್ಲಿ ಕರ್ನಾಟಕ ರಾಜ್ಯದ ಮುಜರಾಯಿ ಇಲಾಖೆಗೆ ಸೇರಿದ ಆಸ್ತಿಯ ವಿವರಗಳೇನು?

2. ಸದರಿ ಆಸ್ತಿಯು ಎಂದಿನಿಂದ ಈ ಸರ್ಕಾರದ ಸುಪರ್ದಿನಲ್ಲಿರುತ್ತದೆ.

ಶ್ರೀ ಬಾಬುರಾವ್ ಚಿಂಚನಸೂರು (ಮುಜರಾಯಿ ಸಚಿವರು) :—

1. ತಿರುಮಲ-ತಿರುಪತಿಯಲ್ಲಿ ಕರ್ನಾಟಕ ರಾಜ್ಯದ ಮುಜರಾಯಿ ಇಲಾಖೆಯ ಕರ್ನಾಟಕ ರಾಜ್ಯ ಛತ್ರಕ್ಕೆ ಸೇರಿದ ಒಟ್ಟು ಆಸ್ತಿ 7.60 ಎಕರೆಗಳು. ವಿವರ ಈ ಕೆಳಕಂಡಂತಿವೆ.

ಕ್ರ.ಸಂ.	ಸರ್ವೆ ನಂ.	ಜಮೀನಿನ ವಿಸ್ತೀರ್ಣ (ಎಕರೆಗಳಲ್ಲಿ)
1.	636/3	1.90
2.	637/1	2.55
3.	592	0.83
4.	635/4	0.06
5,	637/3	0.07
6.	637/4	0.11
7.	592	1.38
8.	592	0.22
9.	592	0.48
	ಒಟ್ಟು	7.60

2. ಸದರಿ ಆಸ್ತಿಯ ಕೆಲವು ನಿವೇಶನಗಳು ಹಿಂದಿನ ಮೈಸೂರು ಮಹಾರಾಜರ ಆಳ್ವಿಕೆ ಕಾಲದಿಂದಲೂ ಸರ್ಕಾರದ ಸ್ವಾಧೀನದಲ್ಲಿವೆ.